ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 61/2019 ಸಿಡಬ್ಲೂ: 11 ಪಿ ಡಬ್ಲೂ: 6**

| | |
|---|---|
| ಹೆಸರು | ರಾಜಶೇಖರ್ |
| ತಂದೆಯ ಹೆಸರು | ರಂಗಯ್ಯ |
| ವಯಸ್ಸು | 36 ವರ್ಷ |
| ವೃತ್ತಿ | ವ್ಯಾಪಾರ |
| ವಾಸ | ಗಂಜಾಂ, ಶ್ರೀರಂಗಪಟ್ಟಣ |

ದಿನಾಂಕ: 17.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:

1. ಆರೋಪಿಯ ಪರಿಚಯವಿದ್ದು, ಆತ ನನ್ನ ಸ್ನೇಹಿತ. ಆರೋಪಿಯು ನನ್ನ ಮಾಲೀಕತ್ವದಲ್ಲಿರುವ ಬುಲೆಟ್ ದ್ವಿಚಕ್ರ ವಾಹನಕ್ಕೆ 4499 ಅನ್ನು ನನ್ನಿಂದ ಪಡೆದುಕೊಂಡಿದ್ದನು. ಸದರಿ ವಾಹನದಿಂದ ಅಪಘಾತವಾಗಿದೆ ಎಂದು ಪೊಲೀಸರು ನನಗೆ ತಿಳಿಸಿದ್ದು, ನಾನು ಅದನ್ನು ಬಿಡಿಸಿಕೊಂಡಿರುತ್ತೇನೆ. ಅಪಘಾತವು ಯಾವ ರೀತಿ ಆಗಿರುತ್ತದೆ ಹಾಗೂ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ವಾಹನವನ್ನು ಯಾವಾಗ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ದಾಖಲಾತಿಗಳನ್ನು ನೀಡಿ ದ್ವಿ ಚಕ್ರ ವಾಹನವನ್ನು ಬಿಡುಗಡೆ ಮಾಡಿಸಿಕೊಂಡಿರುತ್ತೇನೆ. ಪೊಲೀಸರು ನನಗೆ ನೋಟೀಸನ್ನು ನೀಡಿದ್ದು, ನಾನು ಅದಕ್ಕೆ ಮರು ಉತ್ತರ ನೀಡಿರುತ್ತೇನೆ. ಸಾಕ್ಷಿ ಕಲಂ 133 ಐ ಎಂ ವಿ ಕಾಯ್ದೆಯ ನೋಟೀಸನ್ನು ನೋಡಿ

ಗುರುತಿಸಿದ್ದು, ಅದನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರುತಿಸಲಾಗಿದೆ. ಸದರಿ ನೊಟೀಸ್ ಗೆ ಮರುಉತ್ತರವನ್ನು ನೀಡಿದ್ದು, ಸಾಕ್ಷಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಮರುಉತ್ತರವನ್ನು ನಿಪಿ 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಬಾಂಡ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಗಿದೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

2. ದಿಃ 21.05.2019ರಂದು ನಾನು ಆರೋಪಿಗೆ ನನ್ನ ದ್ವಿ ಚಕ್ರವಾಹನವನ್ನು ನೀಡಿದ್ದು, ಆತ ಬನ್ನೂರಿನಿಂದ ಶ್ರೀರಂಗಪಟ್ಟಣಕ್ಕೆ ವಾಪಸ್ಸು ಬರುವಾಗ ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಮರಳುಗಾಲ ಗ್ರಾಮದ ಬಳಿ ಶ್ರೀರಂಗಪಟ್ಟಣದ ಕಡೆಗೆ ಬರುತ್ತಿದ್ದ ಒಬ್ಬ ಮೋಟಾರ್ ಬೈಕ್ ಸವಾರನಿಗೆ ಆರೋಪಿಯು ಅತಿವೇಗ ಹಾಗೂ ಅಜಾಗರೂತಕೆಯಿಂದ ಮೋಟಾರ್ ಚಲಾಯಿಸಿಕೊಂಡು ಬಂದು ಸದರಿ ದ್ವಿ ಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತಕ್ಕೊಳಗಾದ ವ್ಯಕಿಯನ್ನು ನೋಡಲಾಗಿ ಆತ ನಮ್ಮೂರಿನ ಚಲುವರಾಜು ಆಗಿದ್ದ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ಚಲುವರಾಜು ಆರೋಪಿ ಡಿಕ್ಕಿಪಡಿಸಿದ ಕಾರಣ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ತಪ್ಪಿನಿಂದ

ಆಗಿದ್ದರೂ ಸಹ ನಾನು ಆತನಿಗೆ ಸಹಾಯ ಮಾಡುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಬಿ ಎಸ್ ಸಿ ವಕೀಲರಿಂದಃ

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*